# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ–711/2013/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 31/03/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: (1) ಶ್ರೀ ಝಡ್.ಎನ್. ಕಲಾದಗಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮಣೂರ ಗ್ರಾಮ ಪಂಚಾಯತಿ, ಸಿಂದಗಿ ತಾಲ್ಲೂಕು, ವಿಜಾಪೂರ ಜಿಲ್ಲೆ; (2) ಶ್ರೀಮತಿ ಸುನಂದ ಶ್ರೀಮಂತ ರಾಠೋಡ್, ಹಿಂದಿನ ಅಧ್ಯಕ್ಷರು, ಮಣೂರ ಗ್ರಾಮ ಪಂಚಾಯತಿ, ಸಿಂದಗಿ ತಾಲ್ಲೂಕು, ವಿಜಾಪೂರ ಜಿಲ್ಲೆ; (3) ಶ್ರೀಮತಿ ಲಕ್ಷ್ಮೀಬಾಯಿ ಸಂಗನಗೌಡ ಬಿರಾದಾರ, ಹಿಂದಿನ ಅಧ್ಯಕ್ಷರು, ಮಣೂರ ಗ್ರಾಮ ಪಂಚಾಯತಿ, ಸಿಂದಗಿ ತಾಲ್ಲೂಕು, ವಿಜಾಪೂರ ಜಿಲ್ಲೆ; (4) ಶ್ರೀ ಎ.ಆರ್. ನಾಯಕ್, ಪ್ರಭಾರ ಕಾರ್ಯದರ್ಶಿ, ಮಣೂರ ಗ್ರಾಮ ಪಂಚಾಯತಿ, ಸಿಂದಗಿ ತಾಲ್ಲೂಕು, ವಿಜಾಪೂರ ಜಿಲ್ಲೆ ಮತ್ತು (5) ಶ್ರೀ ಎಸ್.ಎಮ್. ನ್ಯಾಮಣ್ಣವರ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮಣೂರ ಗ್ರಾಮ ಪಂಚಾಯತಿ, ಸಿಂದಗಿ ತಾಲ್ಲೂಕು, ವಿಜಾಪೂರ ಜಿಲ್ಲೆ ಇವರುಗಳು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*–*–*

ಪ್ರಕರಣದ ದೂರುದಾರರಾದ ಶ್ರೀ ಶರಣಪ್ಪ ಯಲ್ಲಪ್ಪ ಮಾದರ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಸಿಂಧಗಿ ತಾಲ್ಲೂಕಿನ ಮಣೂರ ಗ್ರಾಮದ ಗ್ರಾಮ ಪಂಚಾಯತಿ ವತಿಯಿಂದ ನರೇಗಾ ಯೋಜನೆ ಅಡಿಯಲ್ಲಿ ಎದುರುದಾರರುಗಳು ಕೆಲಸಗಳನ್ನು ನಿರ್ವಹಿಸಿದ್ದು, ಅದಕ್ಕೆ ಕೂಲಿ ಕಾರ್ಮಿಕರನ್ನು ಉಪಯೋಗಿಸಿಕೊಳ್ಳದೇ ಜೆ.ಸಿ.ಬಿ ಮಷಿನ್ ಅನ್ನು ಉಪಯೋಗಿಸಿ ಕೆಲಸವನ್ನು ನಿರ್ವಹಿಸಿರುತ್ತಾರೆ ಹಾಗೂ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ತಮ್ಮ ಹತ್ತಿರದ ಸಂಬಂಧಿಕರಿಗೆ ನರೇಗಾ ಯೋಜನೆ ಅಡಿಯಲ್ಲಿ ಕೆಲಸ ನೀಡಿರುವುದಾಗಿ ತೋರಿಸಿರುತ್ತಾರೆ. ಎದುರುದಾರರುಗಳು ಸುಮಾರು 70 ಲಕ್ಷ ಮೊತ್ತದ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, 1ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, 2ನೇ ಎದುರುದಾರರಿಗೆ ನೋಟೀಸ್ ತಲುಪಿದ್ದಾಗ್ಯೂ ಸಹ ಅವರ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ, 2ನೇ ಎದುರುದಾರರ ಆಕ್ಷೇಪಣೆ ಏನು ಇಲ್ಲವೆಂದು ಪರಿಗಣಿಸಲಾಗಿದೆ.

3. 1ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ, ನರೇಗಾ ಯೋಜನೆಯಡಿಯಲ್ಲಿ 2010–11 ಹಾಗೂ 2011–12ರ ಸಾಲಿನಲ್ಲಿ ಹಲವಾರು ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಗ್ರಾಮ ಸಭೆಯಲ್ಲಿ ತೀರ್ಮಾನವಾದಂತೆ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿರುತ್ತದೆ. 2009–10ನೇ ಸಾಲಿಗೆ ಸಂಬಂಧಿಸಿದ ಕಾಮಗಾರಿಗಳು ತನಗೆ ಸಂಬಂಧಿಸಿದಿರುವುದಿಲ್ಲವೆಂದು, ಆ ಅವಧಿಯಲ್ಲಿ ತಾನು ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯಾಗಿರಲಿಲ್ಲವೆಂದು ತಿಳಿಸಿರುತ್ತಾರೆ.

4. 1ನೇ ಎದುರುದಾರರ ಆಕ್ಷೇಪಣೆಯನ್ನು ದೂರುದಾರರಿಗೆ ರವಾನಿಸಿ ಅವರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ಸದರಿಯವರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿರುವುದಿಲ್ಲ.

5. ಈ ಹಂತದಲ್ಲಿ ಪ್ರಕರಣದ ತನಿಖೆಯನ್ನು ಈ ಸಂಸ್ಥೆಯ ವಿಜಾಪುರ ಆರಕ್ಷಕ ಅಧೀಕ್ಷಕರಿಗೆ ವಹಿಸಿ ವರದಿ ಸಲ್ಲಿಸುವಂತೆ ಕೋರಲಾಗಿದ್ದು, ಸದರಿಯವರು ಪ್ರಕರಣದ ತನಿಖೆಯನ್ನು ಆರಕ್ಷಕ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ವಿಜಾಪುರ ಇವರಿಗೆ ವಹಿಸಿರುತ್ತಾರೆ. ಸದರಿ ತನಿಖಾಧಿಕಾರಿಯವರು ವರದಿಯನ್ನು ಸಲ್ಲಿಸಿ, ದೂರಿನ ಬಹುತೇಕ ಅಂಶಗಳು ಸಾಬೀತಾಗಿದೆ ಎಂದು ಸದರಿ ಹಣದ ದುರುಪಯೋಗಕ್ಕೆ ಹಾಗೂ ದುರಾಡಳಿತಕ್ಕೆ ಸಂಬಂಧಿಸಿದಂತೆ ಶ್ರೀಮತಿ ಲಕ್ಷ್ಮೀಬಾಯಿ ಸಂಗಣ್ಣಗೌಡ ಬಿರಾದಾರ, ಶ್ರೀಮತಿ ಎಸ್.ಎಸ್. ರಾಠೋಡ, ಹಿಂದಿನ ಅಧ್ಯಕ್ಷರುಗಳು, ಮಣೂರ ಗ್ರಾಮ ಪಂಚಾಯತಿ, ಶ್ರೀ ಎ.ಆರ್. ನಾಯಕ್, ಪ್ರಭಾರ ಕಾರ್ಯದರ್ಶಿ, ಮಣೂರ ಗ್ರಾಮ ಪಂಚಾಯತಿ, ಶ್ರೀ ಝಡ್.ಎನ್. ಕಲಾದಗಿ ಪಿ.ಡಿ.ಒ ಮತ್ತು ಶ್ರೀ ಎಸ್.ಎನ್. ನ್ಯಾಮಣ್ಣನವರ್, ಹಿಂದಿನ ಪಿ.ಡಿ.ಒ, ಮಣೂರ ಗ್ರಾಮ ಪಂಚಾಯತಿ ಇವರುಗಳು ಜವಾಬ್ದಾರರಾಗಿರುತ್ತಾರೆಂದು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಶ್ರೀ ಝಡ್.ಎನ್. ಕಲಡಗಿ ಹಾಗೂ ಶ್ರೀಮತಿ ಎಸ್.ಎಸ್. ರಾಠೋಡ ಇವರುಗಳು ಈಗಾಗಲೇ 1 ಮತ್ತು 2ನೇ ಎದುರುದಾರರಾಗಿ ಪ್ರಕರಣದಲ್ಲಿ ಇದ್ದರಿಂದ, ಉಳಿದ ಶ್ರೀಮತಿ ಲಕ್ಷ್ಮೀಬಾಯಿ ಸಂಗಣ್ಣಗೌಡ ಬಿರಾದಾರ, ಶ್ರೀ ಎ.ಆರ್. ನಾಯಕ್, ಶ್ರೀ ಎಸ್.ಎನ್. ನ್ಯಾಮಣ್ಣನವರ್ ಇವರುಗಳನ್ನು ಪ್ರಕರಣದಲ್ಲಿ 3 ರಿಂದ 5ನೇ ಎದುರುದಾರರಾಗಿ ಅಳವಡಿಸಿಕೊಳ್ಳಲು ಆದೇಶ ಪಡೆದು 3 ರಿಂದ 5ನೇ ಎದುರುದಾರರೆಂದು ಪ್ರಕರಣದಲ್ಲಿ ಅಳವಡಿಸಿಕೊಳ್ಳಲಾಗಿದೆ ಹಾಗೂ ಸದರಿ 3 ರಿಂದ 5ನೇ ಎದುರುದಾರರುಗಳಿಂದ ದೂರಿನ ಬಗ್ಗೆ ಆಕ್ಷಪಣೆಯನ್ನು ಕರೆಯಲಾಗಿದ್ದು, 3 ಮತ್ತು 5ನೇ

ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಆದರೆ, 4ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

6. 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಾನು ಸ್ವಜನ ಪಕ್ಷಪಾತವಾಗಲೀ ಅಥವಾ ಹಣಕಾಸಿನ ದುರುಪಯೋಗವಾಗಲಿ ತನ್ನ ಅವಧಿಯಲ್ಲಿ ಮಾಡಿರುವುದಿಲ್ಲ. ದೂರುದಾರರು ವಿನಾಕಾರಣ ತನ್ನ ಮೇಲೆ ಆರೋಪ ಮಾಡಿರುತ್ತಾರೆ. ದೂರುದಾರರು ಈ ರೀತಿ ದೂರುಗಳನ್ನು ಹಿಂದಿನಿಂದಲೂ ನೀಡುತ್ತಿದ್ದು, ಇದು ಅವರ ಹವ್ಯಾಸವಾಗಿರುತ್ತದೆ. ಆದ್ದರಿಂದ, ತನ್ನ ವಿರುದ್ಧ ಪ್ರಕರಣವನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

7. 5ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಾನು ತನ್ನ ಅವಧಿಯಲ್ಲಿ ಯಾವುದೇ ಕರ್ತವ್ಯಲೋಪವೆಸಗಿಲ್ಲವೆಂದು ಹಾಗೂ ಸ್ವಜನಪಕ್ಷಪಾತ ತೋರಿಸಿಲ್ಲವೆಂದು, ಹಣವನ್ನು ದುರುಪಯೋಗಪಡಿಸಿಕೊಂಡಿಲ್ಲವೆಂದು, ಸರ್ಕಾರದ ಮಾರ್ಗಸೂಚಿಗಳಂತೆ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ. ಗ್ರಾಮ ಸಭೆಯಲ್ಲಿ ತೀರ್ಮಾನಿಸಿದಂತೆ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

8. ದೂರಿನಂಶಗಳನ್ನು, ಎದುರುದಾರರ ಆಕ್ಷೇಪಣೆಯನ್ನು ಹಾಗೂ ತನಿಖಾ ವರದಿಯ ಅಂಶಗಳನ್ನು ಪರಿಶೀಲಿಸಿದಲ್ಲಿ, ದೂರುದಾರರು 2010–11ನೇ ಸಾಲಿನಲ್ಲಿ ಹಾಗೂ 2011–12ನೇ ಸಾಲಿನಲ್ಲಿ ಗ್ರಾಮ ಪಂಚಾಯತಿ ಸದಸ್ಯರನ್ನು, ಕೆಎಸ್‌ಆರ್‌ಟಿಸಿ ಬಸ್ ಕಂಡಕ್ಟರ್ ಅನ್ನು ಹಾಗೂ ಕನ್ನಡ ಶಾಲೆಯ ಶಿಕ್ಷಕರನ್ನು ಕೂಲಿ ಕಾರ್ಮಿಕರಾಗಿ ತೋರಿಸಲಾಗಿರುತ್ತದೆ ಎಂದು ಆಪಾದಿಸಿರುತ್ತಾರೆ. ಆದರೆ, ಪುಂಡಲೀಕ ಸೋಮಸಿಂಗ್ ನಾಯಕ, ಶಿಕ್ಷಕರು ಹಾಗೂ ಶ್ರೀಮತಿ ಶಾರದ ಪುಂಡಲೀಕ ನಾಯಕ ಇವರುಗಳನ್ನು ಕೂಲಿ ಕಾರ್ಮಿಕರಾಗಿ ತೋರಿಸಿ ಕ್ರಮವಾಗಿ 115 ದಿನಗಳು ಹಾಗೂ 214 ದಿನಗಳು ಕೂಲಿಕಾರರಾಗಿ ಕೆಲಸ ಮಾಡಿ, ಕ್ರಮವಾಗಿ ರೂ.14,375/– ಮತ್ತು ರೂ.26,750/– ಅನ್ನು ಕೂಲಿ ಹಣ ಪಡೆದಿರುವ ಬಗ್ಗೆ ನಮೂದು ಇರುತ್ತದೆ. ಸದರಿ ಶ್ರೀ ಪುಂಡಲೀಕ ಸೋಮಸಿಂಗ್ ನಾಯಕ್ ಇವರನ್ನು ತನಿಖಾಧಿಕಾರಿಯವರು ವಿಚಾರಣೆ ಮಾಡಿದ್ದು, ಇವರು ತಮ್ಮ ಹೇಳಿಕೆಯಲ್ಲಿ ತಾನು ಸರ್ಕಾರಿ ಕನ್ನಡ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕನಾಗಿ ಸೇವೆ ಸಲ್ಲಿಸುತ್ತಿರುವುದಾಗಿ ಹಾಗೂ ತನ್ನ ಹೆಸರಿನಲ್ಲಿ ಜಾಬ್ ಕಾರ್ಡ್ ಇಲ್ಲವೆಂದು ತಿಳಿಸಿರುತ್ತಾರೆ. ಆದರೆ, ಶ್ರೀಮತಿ ಶಾರದ ಪುಂಡಲೀಕ್ ನಾಯಕ್ ಇವರು ತನ್ನ ಪತ್ನಿಯಾಗಿದ್ದು, ಸದರಿಯವರು ಮಣೂರ ಗ್ರಾಮ ಪಂಚಾಯತಿಯಲ್ಲಿ ಜಾಬ್ ಕಾರ್ಡ್ ಹೊಂದಿರುತ್ತಾರೆಂದು, ಅವರು ನರೇಗಾ ಯೋಜನೆಯಡಿಯಲ್ಲಿ ಕೂಲಿ ಕಾರ್ಮಿಕರಾಗಿ ಕೆಲಸ ಮಾಡಿರುತ್ತಾರೆಂದು ತಿಳಿಸಿರುತ್ತಾರೆ. ಆದರೆ, ಶ್ರೀ ಪುಂಡಲೀಕ ಸೋಮಸಿಂಗ್ ನಾಯಕ್ ಇವರ

ಜಾಬ್‌ಕಾರ್ಡ್ ಇರುವ ಬಗ್ಗೆ ತನಿಖಾಧಿಕಾರಿಯವರು ದಾಖಲೆಯನ್ನು ಹಾಜರುಪಡಿಸಿರುತ್ತಾರೆ. ಶ್ರೀ ಮುಂಡಲೀಕ ಸೋಮಸಿಂಗ್ ನಾಯಕ್ ಹಾಗೂ ಅವರ ಪತ್ನಿ ಶ್ರೀಮತಿ ಶಾರದ ಮುಂಡಲೀಕ ನಾಯಕ ಇವರುಗಳು ಕೂಲಿ ಕಾರ್ಮಿಕರಾಗಿ ಒಟ್ಟು ರೂ.27,120/- ಅನ್ನು ಪಡೆದಿರುವ ಬಗ್ಗೆ ದಾಖಲೆಯನ್ನು ತನಿಖಾಧಿಕಾರಿಯವರು ಹಾಜರುಪಡಿಸಿರುತ್ತಾರೆ.

9. ಶ್ರೀಮತಿ ಭಾರತಿ ಅಲಿಯಾಸ್ ಗೀತಾ ಕೋಂ ಸಿದ್ದಪ್ಪ ಆನಂದಿ ಇವರು ಗ್ರಾಮ ಪಂಚಾಯತಿ ಸದಸ್ಯರಿದ್ದು, ಪಿಟಿ ಕಾಮಗಾರಿಯಲ್ಲಿ ರೂ.1.00 ಲಕ್ಷ ಕೂಲಿ ಹಣ ಪಡೆದ ಬಗ್ಗೆ ದೂರುದಾರರು ಆಪಾದಿಸಿದ್ದು, ಸದರಿ ಶ್ರೀಮತಿ ಭಾರತಿ ಇವರು ತಮ್ಮ ಹೇಳಿಕೆಯಲ್ಲಿ ತಾನು 2010 ರಿಂದ 2015ರವರೆಗೆ ಮಣೂರ ಗ್ರಾಮ ಪಂಚಾಯತಿಯಲ್ಲಿ ಸದಸ್ಯರಾಗಿ ಕಾರ್ಯನಿರ್ವಹಿಸಿರುವುದಾಗಿಯೂ ಹಾಗೂ ನರೇಗಾ ಯೋಜನೆಯಡಿಯಲ್ಲಿ ತಾನು ಯಾವುದೇ ಜಾಬ್ ಕಾರ್ಡ ಹೊಂದಿರುವುದಿಲ್ಲವೆಂದು ಹಾಗೂ ಕೂಲಿ ಕಾರ್ಮಿಕಳಾಗಿ ಕೆಲಸ ನಿರ್ವಹಿಸಿಲ್ಲವೆಂದು ತಿಳಿಸಿರುತ್ತಾರೆ. ಆದರೆ, ಗ್ರಾಮ ಪಂಚಾಯತಿಯಿಂದ ಪಡೆದ ದಾಖಲೆಗಳಲ್ಲಿ ಶ್ರೀಮತಿ ಭಾರತಿ ಅಲಿಯಾಸ್ ಗೀತಾ ಇವರ ಜಾಬ್ ಕಾಡ್ ಆಗಲೀ ಅಥವಾ ಅವರು ಕೂಲಿ ಕಾರ್ಮಿಕರಾಗಿ ಕೆಲಸ ನಿರ್ವಹಿಸಿದ ದಾಖಲೆಯಾಗಲೀ ಯಾವುದು ಇರುವುದಿಲ್ಲವೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ.

10. ಶ್ರೀಮತಿ ಕವಿತಾ ರಾಜಶೇಖರ್ ಮಣೂರ ಇವರು ಗ್ರಾಮ ಪಂಚಾಯತಿ ಸದಸ್ಯರಾಗಿದ್ದು, ಕೂಲಿ ಕಾರರಾಗಿ ರೂ.24,875/- ಅನ್ನು ಪಡೆದಿರುತ್ತಾರೆ. ಇವರ ಪತಿ ಶ್ರೀ ರಾಜಶೇಖರ್ ಮಣೂರ ಇವರು 148 ದಿನಗಳ ಕೂಲಿ ಕೆಲಸಕ್ಕೆ ರೂ.18,500/- ಅನ್ನು ಹಾಗೂ ಶ್ರೀ ಪ್ರಭುರಾಜ ಇವರು ಶ್ರೀಮತಿ ಕವಿತಾ ರಾಜಶೇಖರ್ ರವರ ಮಾವನಾಗಿದ್ದು, ಇವರು ಪಿಟಿ ನಿರ್ಮಾಣದಲ್ಲಿ ರೂ.1.00 ಲಕ್ಷ ಹಣವನ್ನು ಕೂಲಿ ಕಾರ್ಮಿಕರಾಗಿ ಪಡೆದಿರುವ ಬಗ್ಗೆ ದಾಖಲೆಗಳು ಇರುತ್ತವೆ. ಈ ಮೂರು ಜನ ವ್ಯಕ್ತಿಗಳು ಜಾಬ್ ಕಾರ್ಡ್‌ಗಳನ್ನು ಹೊಂದಿರುತ್ತಾರೆ (ಸದರಿ ಜಾಬ್ ಕಾರ್ಡ್ ಪ್ರತಿಯನ್ನು ಹಾಜರುಪಡಿಸಲಾಗಿದೆ). ಸದರಿ ಗ್ರಾಮ ಪಂಚಾಯತಿ ಸದಸ್ಯರಾದ ಶ್ರೀಮತಿ ಕವಿತಾ ರಾಜಶೇಖರ್ ಮಣೂರ ಹಾಗೂ ಅವರ ಪತಿ ಮತ್ತು ಮಾವ ಕೂಲಿ ಕಾರ್ಮಿಕರಾಗಿ ಕೆಲಸ ನಿರ್ವಹಿಸಿ ಹಣ ಪಡೆದಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಲಾಗಿದೆ.

11. ಶ್ರೀ ವಸಂತ ಲೇಸು ರಾಠೋಡ್ ಇವರು ಗ್ರಾಮ ಪಂಚಾಯತಿ ಸದಸ್ಯರಾಗಿದ್ದು, 48 ದಿನಗಳ ಕೂಲಿ ಕೆಲಸ ಮಾಡಿ ರೂ.6000/- ಮೊತ್ತದ ಹಣವನ್ನು ಹಾಗೂ ಅವರ ಪತ್ನಿ ಶ್ರೀಮತಿ ಮಂಜುಳ ವಸಂತ ರಾಠೋಡ ಇವರು 160 ದಿನಗಳ ಕೂಲಿ ಕೆಲಸ ಮಾಡಿ ರೂ.20,000/- ಕೂಲಿ ಹಣ ಪಡೆದ ಬಗ್ಗೆ ಆಪಾದನೆ ಇದ್ದು, ಸದರಿ ಶ್ರೀ ವಸಂತ ಲೇಸು ರಾಠೋಡ್ ಇವರು ತಮ್ಮ ಹೇಳಿಕೆಯಲ್ಲಿ 2005-

9

06ನೇ ಸಾಲಿನಿಂದ ತನಿಖಾ ಅವಧಿಯವರೆಗೂ ತಾವು ಗ್ರಾಮ ಪಂಚಾಯತಿ ಸದಸ್ಯರಾಗಿರುವ ಬಗ್ಗೆ ತಿಳಿಸಿರುತ್ತಾರೆ. 2008-09ನೇ ಸಾಲಿನಲ್ಲಿ ಜಾಬ್‌ಕಾರ್ಡ್ ಹೊಂದಿದ್ದು, ಸುಮಾರು ರೂ.40,000/- ಕೂಲಿ ಹಣ ಪಡೆದಿರುವ ಬಗ್ಗೆ ತಿಳಿಸಿರುತ್ತಾರೆ ಹಾಗೆಯೇ ಶ್ರೀಮತಿ ಮಂಜುಳ ರಾಠೋಡ್ ಇವರು ತಮ್ಮ ಪತ್ನಿಯಾಗಿದ್ದು, 2009-10ನೇ ಸಾಲಿನಲ್ಲಿ ಆಕೆಯು ಜಾಬ್ ಕಾರ್ಡ್ ಹೊಂದಿದ್ದು, ಕೂಲಿ ಕೆಲಸದಿಂದ ರೂ.30,000/- ಹಣ ಪಡೆದ ಬಗ್ಗೆ ತಿಳಿಸಿರುತ್ತಾರೆ.

12. ಶ್ರೀಮತಿ ಲಕ್ಷ್ಮೀಬಾಯಿ ಸಂಗನಗೌಡ ಬಿರಾದಾರ್ ಇವರು ಗ್ರಾಮ ಪಂಚಾಯತಿಯ ಉಪಾಧ್ಯಕ್ಷರಾಗಿದ್ದು, ಎಂಪಿಟಿ ಕಾಮಗಾರಿಯಲ್ಲಿ ರೂ.24,996/- ಅನ್ನು ಕೂಲಿ ಹಣವಾಗಿ ಪಡೆದಿರುವ ಬಗ್ಗೆ ಆಪಾದನೆ ಇದ್ದು, ಈ ಬಗ್ಗೆ ಸದರಿ ಶ್ರೀಮತಿ ಲಕ್ಷ್ಮೀಬಾಯಿ ಸಂಗನಗೌಡ ಬಿರಾದಾರ್ ಇವರು ಹೇಳಿಕೆ ನೀಡಿ 2010 ರಿಂದ 2015 ರ ಅವಧಿಯಲ್ಲಿ 30 ತಿಂಗಳ ಕಾಲ ಗ್ರಾಮ ಪಂಚಾಯತಿಯ ಉಪಾಧ್ಯಕ್ಷರಾಗಿ ಕೆಲಸ ನಿರ್ವಹಿಸಿದ್ದು, ಉಳಿದ 30 ತಿಂಗಳು ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿದ ಬಗ್ಗೆ ತಿಳಿಸಿರುತ್ತಾರೆ ಹಾಗೂ ತಮ್ಮ ಹೇಳಿಕೆಯಲ್ಲಿ ತಾನು ನರೇಗಾ ಯೋಜನೆಯಡಿಯಲ್ಲಿ ತಾನು ಯಾವುದೇ ಜಾಬ್ ಕಾರ್ಡ್ ಹೊಂದಿರುವುದಿಲ್ಲವೆಂದು ಹಾಗೂ ಕೂಲಿಕಾರ್ಮಿಕರಾಗಿ ಕೆಲಸ ನಿರ್ವಹಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಸದರಿ ಶ್ರೀಮತಿ ಲಕ್ಷ್ಮೀಬಾಯಿ ಸಂಗನಗೌಡ ಬಿರಾದಾರ್ ಇವರ ಜಾಬ್ ಕಾರ್ಡ್ ಇರುವ ಬಗ್ಗೆ ತನಿಖಾಧಿಕಾರಿಯವರು ಹಾಜರುಪಡಿಸಿದ್ದು ಮತ್ತು ಅವರು ಕೂಲಿ ಕಾರ್ಮಿಕರಾಗಿ ಕೆಲಸ ನಿರ್ವಹಿಸಿರುವ ಬಗ್ಗೆ ದಾಖಲೆಯನ್ನು ಸದರಿ ಜಾಬ್ ಕಾರ್ಡ್ ಪ್ರತಿಯೊಡನೆ ಸಲ್ಲಿಸಲಾಗಿರುತ್ತದೆ. ಇದರಿಂದ ಸದರಿಯವರ ಹೆಸರಿನಲ್ಲಿ ನರೇಗಾ ಯೋಜನೆಯಡಿಯಲ್ಲಿ ಸುಳ್ಳು ಜಾಬ್ ಕಾರ್ಡ್ ತಯಾರಿಸಿ ಹಣವನ್ನು ದುರುಪಯೋಗಪಡಿಸಿರುವುದು ಕಂಡು ಬರುತ್ತದೆ.

13. ಶ್ರೀಮತಿ ಮೀನಾಕ್ಷಿ ಶ್ರೀಶೈಲ ಹಿರೇಕುರುಬರ ಇವರು ಗ್ರಾಮ ಪಂಚಾಯತಿ ಸದಸ್ಯರಾಗಿದ್ದು, ನರೇಗಾ ಯೋಜನೆಯಡಿಯಲ್ಲಿ 72 ದಿನ ಕೂಲಿ ಕಾರ್ಮಿಕರಾಗಿ ರೂ.30,000/- ಕೂಲಿ ಹಣ ಪಡೆದ ಬಗ್ಗೆ ಆಪಾದನೆ ಇದ್ದು, ಸದರಿ ಶ್ರೀಮತಿ ಮೀನಾಕ್ಷಿ ಶ್ರೀಶೈಲ ಹಿರೇಕುರುಬರ ಇವರು ತಮ್ಮ ಹೇಳಿಕೆಯಲ್ಲಿ 2008-09ನೇ ಸಾಲಿನಲ್ಲಿ ತಾನು ಕೂಲಿ ಕಾರ್ಮಿಕರಾಗಿ ಕೆಲಸ ನಿರ್ವಹಿಸಿದ್ದು, ಸುಮಾರು ರೂ.7500/- ಅನ್ನು ಕೂಲಿ ಹಣವಾಗಿ ಪಡೆದಿರುವುದಾಗಿ ತಿಳಿಸಿರುತ್ತಾರೆ ಹಾಗೂ ಇವರು 2010 ರಿಂದ 2015ರವರೆಗೆ ಗ್ರಾಮ ಪಂಚಾಯತಿ ಸದಸ್ಯರಾಗಿ ಇದ್ದ ಬಗ್ಗೆ ಹೇಳಿಕೆ ನೀಡಿರುತ್ತಾರೆ. ಆದರೆ, ಗ್ರಾಮ ಪಂಚಾಯತಿಯ ದಾಖಲೆಗಳಲ್ಲಿ ಸದರಿ ಶ್ರೀಮತಿ ಮೀನಾಕ್ಷಿ ಶ್ರೀಶೈಲ ಹಿರೇಕುರುಬರ ಇವರು ಜಾಬ್ ಕಾರ್ಡ್ ಹೊಂದಿದ್ದು, ರೂ.13,030/- ಅನ್ನು ಕೂಲಿ ಹಣ ಪಡೆದಿರುವುದಾಗಿ ತೋರಿಸಲಾಗಿರುತ್ತದೆ. ಇದರಿಂದ, ಸದರಿ ಗ್ರಾಮ ಪಂಚಾಯತಿ ಎದುರುದಾರರು ಸುಳ್ಳು ದಾಖಲೆಯನ್ನು ಸೃಷ್ಟಿಸಿ ಹಣವನ್ನು ದುರುಪಯೋಗಪಡಿಸಿಕೊಂಡಿರುವುದು ಕಂಡು ಬರುತ್ತದೆ. (ಸದರಿ ಶ್ರೀಮತಿ ಮೀನಾಕ್ಷಿ ಶ್ರೀಶೈಲ

ಹಿರೇಕುರುಬರ ಇವರ ಜಾಬ್ ಕಾರ್ಡ ಅನ್ನು ಹಾಗೂ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಲಾಗಿದೆ).

14. ಶ್ರೀಮತಿ ರಾಜಶ್ರೀ ಸಾಲೊಟಗಿ ಇವರು ಕೆ.ಎಸ್.ಆರ್.ಟಿ.ಸಿ ಕಂಡಕ್ಟರ್ ರವರ ಪತ್ನಿಯಾಗಿದ್ದು, ಇವರಿಗೆ ಬಸವ ವಸತಿ ಯೋಜನೆಯಲ್ಲಿ ಮನೆ ಮಂಜೂರು ಆದ ಆಪಾದನೆ ಇರುತ್ತದೆ. ಈ ಬಗ್ಗೆ ಶ್ರೀಮತಿ ರಾಜಶ್ರೀ ಯವರು ಹೇಳಿಕೆಯನ್ನು ನೀಡಿದ್ದು, ಇವರು ಅಕ್ಟೋಬರ್ 2012ರಲ್ಲಿ ತಮ್ಮ ಪತಿ ಬೆಂಗಳೂರಿನ ಬಿಎಂಟಿಸಿ ಚಾಲಕ ಕಂ ನಿರ್ವಾಹಕ ಆಗಿ ಕೆಲಸ ನಿರ್ವಹಿಸುತ್ತಿದ್ದು, ಡಿಸೆಂಬರ್ 2012 ರಲ್ಲಿ ಕೆಲಸ ಬಿಟ್ಟಿರುತ್ತಾರೆ. 2010–11ನೇ ಸಾಲಿನಲ್ಲಿ ಬಸವ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಯಾಗಿ ತಾವು ಮನೆ ಕಟ್ಟಿಸಿಕೊಂಡಿರುವುದಾಗಿ ತಾವು ಹೇಳಿಕೆ ನೀಡಿರುತ್ತಾರೆ. ಸದರಿ ಫಲಾನುಭವಿಗಳ ಕಡತ ಪರಶೀಲಿಸಲಾಗಿ ಸದರಿ ಫಲಾನುಭವಿಯ ಮನೆ ಕಟ್ಟಡ ನಿರ್ಮಾಣದ ಯಾವುದೇ ಹಂತದ ಪೋಟೋ ಅಳವಡಿಸಿಲ್ಲವೆಂದು ಹಾತ್ ನಕಾಶೆಯಲ್ಲಿ ಕೇವಲ ಫಲಾನುಭವಿಯ ಹೆಸರು ಮಾತ್ರ ಇದ್ದು, ಇತರೆ ವಿವರಗಳಿರುವುದಿಲ್ಲ. ಕಟ್ಟಡ ರಚನೆ ಪರವಾನಗೆ ಪತ್ರದಲ್ಲಿ ಮಾಹಿತಿಗಳು ಅಪೂರ್ಣವಾಗಿದ್ದು, ಪಂಚಾಯತಿಯ ಅಧಿಕಾರಿಗಳ ಸಹಿ ಇರುವುದಿಲ್ಲ. ಫಲಾನುಭವಿಯ ಕರಾರು ಪತ್ರದಲ್ಲಿ ಆಸ್ತಿಯ ಚೆಕ್ ಬಂದಿಯ ವಿವರ ಇರುವುದಿಲ್ಲ ಹಾಗೂ ಫಲಾನುಭವಿಯ ಸಹಿ ಇರುವುದಿಲ್ಲವೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ಹಾಗೂ ನಮೂನೆ–1ರಲ್ಲಿ ಫಲಾನುಭವಿಯ ಭಾವಚಿತ್ರ ಹಾಗೂ ಸಹಿ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಇದಲ್ಲದೇ ದೂರುದಾರರು ತಾವು ಮತ್ತು ಕುಟುಂಬದ ಸದಸ್ಯರು ಕೂಲಿ ಕೆಲಸ ಮಾಡದೇ ಇದ್ದರೂ ಸಹ ತಮ್ಮ ಹೆಸರಿನಲ್ಲಿ ಜಾಬ್ ಕಾರ್ಡ್ ಅನ್ನು ತೋರಿಸಿ ಕೂಲಿ ಕೆಲಸ ನಿರ್ವಹಿಸಿರುವ ಬಗ್ಗೆ ದಾಖಲೆಯನ್ನು ಸೃಷ್ಟಿಸಲಾಗಿದೆ ಎಂದು ತಿಳಿಸಿರುತ್ತಾರೆ. (ಸದರಿ ದೂರುದಾರರಿಗೆ ಹಾಗೂ ಅವರ ಕುಟುಂಬದವರ ಜಾಬ್ ಕಾರ್ಡನ ಪ್ರತಿ ಹಾಗೂ ಇತರೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಲಾಗಿದೆ).

15. ಸದರಿ ದಾಖಲೆಗಳನ್ನು ಪರಿಶೀಲಿಸಿದಲ್ಲಿ ದೂರುದಾರರ ಅಥವಾ ಅವರ ಕಟುಂಬ ವರ್ಗದವರ ಹೆಸರಿನಲ್ಲಿ ಜಾಬ್ ಕಾರ್ಡ್ ಸೃಷಿಸಿ ಕೂಲಿ ಹಣವನ್ನು ತೆಗೆದಿರುವುದು ಕಂಡು ಬರುತ್ತದೆ. ಆದರೆ, ದೂರುದಾರರು ತಾನು 2008–09ನೇ ಸಾಲಿನಲ್ಲಿ ಯಾವುದೇ ಜಾಬ್ ಕಾರ್ಡ್ ಹೊಂದಿರಲಿಲ್ಲವೆಂದು ಮತ್ತು ತಾನು ಕೂಲಿ ಕೆಲಸ ಮಾಡಿ ಹಣ ಪಡೆದಿಲ್ಲವೆಂದು ತಿಳಿಸಿರುತ್ತಾರೆ. ಹಾಗೆಯೇ ದೂರುದಾರರ ತಂದೆ ಇವರು 42 ದಿನಗಳು ಕೂಲಿ ಕೆಲಸ ಮಾಡಿದಂತೆ ತೋರಿಸಿ ರೂ.5,500/– ಬಿಡುಗಡೆ ಮಾಡಿರುವಂತೆ ತೋರಿಸಿದ್ದು, ಸದರಿಯವರು ಸಹ ತಾವು ಕೂಲಿ ಕಾರ್ಮಿಕರಾಗಿ ಕೆಲಸ ನಿರ್ವಹಿಸಿಲ್ಲ ಹಾಗೂ ಹಣ ಸಂದಾಯವಾಗಿಲ್ಲವೆಂದು ತಿಳಿಸಿರುತ್ತಾರೆ.

16. ಇದಲ್ಲದೇ, ದೂರುದಾರರು ಆಪಾದಿಸಿರುವಂತೆ ಶ್ರೀ ಶರಣ ಮಾಸ್ತರ ಇವರ ಮನೆಯಿಂದ ಪಂಪ್ ಹೌಸ್ ವರೆಗಿನ ರಸ್ತೆ ಸುಧಾರಣೆ ಬಗ್ಗೆ ರೂ.1.50 ಲಕ್ಷಕ್ಕೆ ತಾಂತ್ರಿಕ ಮಂಜೂರಾತಿ ನೀಡಲಾಗಿದ್ದು, ಸದರಿ ಕಾಮಗಾರಿಗೆ ಸಂಬಂಧಿಸಿದಂತೆ, ಸ್ಥಳ ಪರಿಶೀಲನೆ ಮಾಡಲಾಗಿ, ಕಾಂಕ್ರೀಟ್ ರಸ್ತೆ ನಿರ್ಮಿಸಿರುವುದು ಕಂಡು ಬಂದಿರುತ್ತದೆ ಎಂದು ಮತ್ತು ಕಾಮಗಾರಿಯ ಅಳತೆ ಪುಸ್ತಕವನ್ನು ಮತ್ತು ಅಂದಾಜು ಪಟ್ಟಿಯನ್ನು ಪರಿಶೀಲಿಸಿದ್ದು, ಅಂದಾಜು ಪಟ್ಟಿಯಾನುಸಾರ ಕಾಮಗಾರಿಯನ್ನು ನಿರ್ವಹಿಸಿರುವುದು ಕಂಡು ಬಂದಿರುತ್ತದೆ ಎಂದು ಹಾಗೂ ರಸ್ತೆಯ ಅಳತೆಯು ಸಹ ಹೊಂದಾಣಿಕೆಯಾಗಿರುತ್ತದೆ ಎಂದು ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ಸದರಿ ರಸ್ತೆ ಕಾಮಗಾರಿಯನ್ನು ಪರಿಶೀಲಿಸಲು ಲೋಕೋಪಯೋಗಿ ಇಲಾಖೆಯ ಸಹಾಯಕ ಅಭಿಯಂತರರಾದ ಶ್ರೀ ಆರ್.ಎನ್. ಮಸಳಿ ಇವರನ್ನು ಸ್ಥಳ ಪರಿಶೀಲನೆಗಾಗಿ ಕರೆದುಕೊಂಡು ಹೋಗಿದ್ದ ಬಗ್ಗೆ ಹಾಗೂ ಅವರು ಸ್ಥಳದಲ್ಲಿ ನಿರ್ಮಿಸಲಾಗಿದ್ದ ಸಿಸಿ ರಸ್ತೆಯನ್ನು ಪರಿಶೀಲಿಸಿದ ಬಗ್ಗೆ ತಿಳಿಸಿರುತ್ತಾರೆ. ಮುಂದುವರೆದು, ತನಿಖಾಧಿಕಾರಿಯವರು ತಮ್ಮ ತನಿಖಾ ವರದಿಯಲ್ಲಿ ಅರ್ಜಿದಾರರು ಯಾವುದೇ ನಿರ್ದಿಷ್ಟವಾದ ಆಪಾದನೆ ಮಾಡಿಲ್ಲವಾದ್ದರಿಂದ, ದೂರುದಾರರಿಗೆ ನೋಟೀಸ್ ಕೊಟ್ಟು ವಿಚಾರಿಸಲಾಗಿದ್ದು, ನಿರ್ದಿಷ್ಟವಾಗಿ ಯಾವುದೇ ಆಪಾದನೆ ಬಗ್ಗೆ ತಿಳಿಸಿಲ್ಲವೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ.

17. ಈ ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ನರೇಗಾ ಯೋಜನೆಯಡಿಯಲ್ಲಿ ಎದುರುದಾರರುಗಳು ಸುಳ್ಳು ಜಾಬ್ ಕಾರ್ಡ್‌ಗಳನ್ನು ಸೃಷ್ಟಿಸಿ ಹಣವನ್ನು ಬಿಡುಗಡೆ ಮಾಡಿರುವಂತೆ ತೋರಿಸಿ ಹಣವನ್ನು ದುರುಪಯೋಗಪಡಿಸಿಕೊಂಡಿರುವುದು ಕಂಡು ಬರುತ್ತದೆ. ಹಾಗೆಯೇ ಎದುರುದಾರರುಗಳು ಗ್ರಾಮ ಸಭಾ ಸದಸ್ಯರುಗಳಾಗಿ ತಮ್ಮ ಸಂಬಂಧಿಕರನ್ನೇ ಕೂಲಿ ಕಾರ್ಮಿಕರೆಂದು ಆಯ್ಕೆ ಮಾಡಿ ಅವರ ಹೆಸರುಗಳಲ್ಲಿ ಜಾಬ್ ಕಾರ್ಡ್ ಅನ್ನು ಸೃಷ್ಟಿಸಿ ಹಣವನ್ನು ದುರುಪಯೋಗಪಡಿಸಿಕೊಂಡಿರುವುದು ಸಹ ಕಂಡು ಬರುತ್ತದೆ. ಇದಲ್ಲದೇ, ಗ್ರಾಮಸಭಾ ಸದಸ್ಯರುಗಳಾಗಿದ್ದ 2 ಮತ್ತು 3ನೇ ಎದುರುದಾರರುಗಳು ಸಹ ತಮ್ಮ ಹೆಸರುಗಳಲ್ಲೆ ಕೂಲಿ ಹಣ ತೆಗೆದಿರುವುದು ಕಂಡು ಬರುತ್ತದೆ. ಇದರಿಂದ ಎದುರುದಾರರುಗಳು ಸ್ವಜನ ಪಕ್ಷಪಾತವನ್ನು ತೋರಿರುವುದು ಹಾಗೂ ಹಣವನ್ನು ದುರುಪಯೋಗ ಪಡಿಸಿಕೊಂಡಿರುವುದು ಸ್ಪಷ್ಟ ಪಟ್ಟಿರುತ್ತದೆ. ಹಾಗೂ ಸರ್ಕಾರದ ಮಾರ್ಗಸೂಚಿಗಳನ್ನು ನಿರ್ಲಕ್ಷಿಸಿ ಕರ್ತವ್ಯಲೋಪವೆಸಗಿರುವುದು ಸಹ ಕಂಡು ಬರುತ್ತದೆ.

18. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮಗಳು 1966ರ ನಿಯಮ 3(1)(ii) ಮತ್ತು (iii) ರನ್ವಯ ಎದುರುದಾರರುಗಳು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, **1ನೇ ಎದುರುದಾರರಾದ ಶ್ರೀ ಝಡ್.ಎನ್. ಕಲಾದಗಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮಣೂರ ಗ್ರಾಮ ಪಂಚಾಯತಿ, ಸಿಂದಗಿ**

12

**ತಾಲ್ಲೂಕು, ವಿಜಾಪೂರ ಜಿಲ್ಲೆ; 4ನೇ ಎದುರುದಾರರಾದ ಶ್ರೀ ಎ.ಆರ್. ನಾಯಕ್, ಪ್ರಭಾರ ಕಾರ್ಯದರ್ಶಿ, ಮಣೂರ ಗ್ರಾಮ ಪಂಚಾಯತಿ, ಸಿಂದಗಿ ತಾಲ್ಲೂಕು, ವಿಜಾಪೂರ ಜಿಲ್ಲೆ ಮತ್ತು 5ನೇ ಎದುರುದಾರರಾದ ಶ್ರೀ ಎಸ್.ಎಮ್. ನ್ಯಾಮಣ್ಣವರ, ಹಿಂದಿನ ಪಂಚಾಯತಿ ಅಭಿವೃದ್ದಿ ಅಧಿಕಾರಿ, ಮಣೂರ ಗ್ರಾಮ ಪಂಚಾಯತಿ, ಸಿಂದಗಿ ತಾಲ್ಲೂಕು, ವಿಜಾಪೂರ ಜಿಲ್ಲೆ** ಇವರುಗಳ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

19. **ಹಾಗೂ 2ನೇ ಎದುರುದಾರರಾದ ಶ್ರೀಮತಿ ಸುನಂದ ಶ್ರೀಮಂತ ರಾಠೋಡ್, ಹಿಂದಿನ ಅಧ್ಯಕ್ಷರು, ಮಣೂರ ಗ್ರಾಮ ಪಂಚಾಯತಿ, ಸಿಂದಗಿ ತಾಲ್ಲೂಕು, ವಿಜಾಪೂರ ಜಿಲ್ಲೆ ಮತ್ತು 3ನೇ ಎದುರುದಾರರಾದ ಶ್ರೀಮತಿ ಲಕ್ಷ್ಮೀಬಾಯಿ ಸಂಗನಗೌಡ ಬಿರಾದಾರ, ಹಿಂದಿನ ಅಧ್ಯಕ್ಷರು, ಮಣೂರ ಗ್ರಾಮ ಪಂಚಾಯತಿ, ಸಿಂದಗಿ ತಾಲ್ಲೂಕು, ವಿಜಾಪೂರ ಜಿಲ್ಲೆ** ಇವರುಗಳು ಸಾರ್ವಜನಿಕ ನೌಕರರು/ಚುನಾಯಿತ ಪ್ರತಿನಿಧಿಗಳಾಗಿರುವುದರಿಂದ, ಇವರುಗಳ ವಿರುದ್ಧ ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆಯಡಿ ಕ್ರಮವನ್ನು ಜರುಗಿಸಲು ಶಿಫಾರಸ್ಸು ಮಾಡಿದೆ.

20. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 1/4

**(ನ್ಯಾಯಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**

31/3/17